Regd No B G 155

SATYAVADI Daily, MYSORE 4 ✱ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

✱ ಪೋಸ್ಟು ಕಾರ್ಡುಗಳ ಬೆಲೆ ಇಳಿಸುವದಿಲ್ಲ ✱

ಚುನಾವಣೆಗೆ ಕುರುಡ ಮನುಷ್ಯ

ಹೈದರಾಬಾದು— ಕುರುಡನಾಗಿರುವ ಪೋಸ್ಟ್‌ಗ್ರಾಜುಯೇಟು ಶ್ರೀ ಸತ್ಯನಾರಾಯಣರು ಉಸ್ಮಾನಿಯಾ ವಿಶ್ವವಿದ್ಯಾಲಯದ ಸೆನೇಟಿನಲ್ಲಿ ಸ್ಥಾನಕ್ಕೆ ಸ್ಪರ್ಧಿಸಿದಾರೆ.

★

ಇಂದಿರಾ ಗಾಂಧಿಯರ ಮೇಲೆ ಆರೋಪಣೆ

ಕೊಯಮತ್ತೂರು— ಸುಪ್ರೀಂ ಕೋರ್ಟು ಜಡ್ಜರನ್ನು ನೇಮಿಸುವ ರೀತಿಯಲ್ಲಿ ಬದಲಾವಣೆ ಮಾಡಲು, ಪ್ರಧಾನಿಯವರು ಸಹಿಸಂಗ್ರಹ ಚಳವಳಿ ನಡೆಸುತ್ತಿದ್ದು, ಈಗಾಗಲೇ 104 ಸಹಿ ಸಂಗ್ರಹಿಸಲಾಗಿದೆಯೆಂದೂ ಪಾರ್ಲಿಮೆಂಟು ಸದಸ್ಯೆ ತಾರಕೇಶ್ವರಿ ಸಿನ್ಹರವರು ಆರೋಪಿಸಿರುವರು.

○

ಪ್ರತಿಬಂಧಕಾಜ್ಞೆ

ಮಂಡ್ಯ— ಇಲ್ಲಿ 6 ದಿನಗಳ ಕಾಲ ಪ್ರತಿಬಂಧಕಾಜ್ಞೆ ಜಾರಿ ಮಾಡಲಾಗಿದೆ.

●

ಹರಿಜನರಿಗೆ ಹಿಂಸೆ

ಚಿಕ್ಕಬಳ್ಳಾಪುರ— ಕಟ್ಟಾಡಿ ಹಳ್ಳಿಯಲ್ಲಿ ಒಂದು ಗುಂಪಿನ ಜನರು ಅಲ್ಲಿಯ ಹರಿಜನರನ್ನು ಕಲ್ಲು ದೊಣ್ಣೆಗಳಿಂದ ಹೊಡೆದು ಓಡಿದರೆಂದು ಶಿಡ್ಲಘಟ್ಟದ ಪೋಲೀಸರು ತಿಳಿಸಿದ್ದಾರೆ – ಹೊಸೂರು ಕೃಷ್ಣಪ್ಪನವರೂ ಸೇರಿ 20 ಮಂದಿಯ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳಲಾಗಿದೆ.

○

ಹೊಸ ರಥ

ಬೆಂಗಳೂರು— ಶಿವನಸಮುದ್ರದ ಶ್ರೀ ರಂಗನಾಥಸ್ವಾಮಿ ರಥೋತ್ಸವವು ತಾ.21 ರಂದು ಹೊಸ ರಥದಲ್ಲಿ ನಡೆಯುವದು.

○

ಚಂಡಿಘರ ಬಿಕ್ಕಟ್ಟು

ನವದೆಹಲಿ— ಚಂಡೀಘರದ ಬಿಕ್ಕಟ್ಟಿನ ಸಮಸ್ಯೆ ಬಗ್ಗೆ ಸರಕಾರವು ತನ್ನ ನಿರ್ಧಾರವನ್ನು ಸಧ್ಯದಲ್ಲಿ ಪ್ರಕಟಿಸುವಂತೆ ಕಾಣಲಿಲ್ಲ – ಕೇಂದ್ರದ ತೀರ್ಪು ಎಷ್ಟೇ ನ್ಯಾಯವಾಗಿದ್ದರೂ ಪಂಜಾಬು ಮತ್ತು ಹರಿಯಾಣಕ್ಕೆ ಒಪ್ಪಿತವಾಗಿರುವುದಿಲ್ಲದ ಪರಿಸ್ಥಿತಿ ಇದೆ – ಸಂತ ಫತೇಸಿಂಗರು ಫೆಬ್ರವರಿ 1 ರಂದು ಪ್ರಾಣಾರ್ಪಣೆ ಬೆದರಿಗೆ ಹಾಕಿದ್ದಾರೆ – ಹರಯಾಣದ ಫಾರ್ವರ್ಡ್ ಬ್ಲಾಕ್ ನಾಯ ಶ್ರೀ ಕೆ ಕೆ ಟೋಪ್ಪ, ತಾನು ಸಂತ ಫತೇಸಿಂಗರು ಪ್ರಾಣಾರ್ಪಣೆ ಮಾಡುವದಕ್ಕೆ 7 ಗಂಟೆ ಮುಂಚಿತವಾಗಿ ತಾವು ಸುಟ್ಟುಕೊಳ್ಳುವುದಾಗಿ ಪ್ರಕಟಿಸಿರುವರು.

○

ತರಗತಿಗೆ ಹೋಗಲಿಲ್ಲ

ಹೈದರಾಬಾದು— ಶ್ರೀ ಮಲ್ಲಿಕಾರ್ಜುನ ಮತ್ತಿತರ ವಿದ್ಯಾರ್ಥಿ ನಾಯಕರನ್ನು ದಸ್ತಗಿರಿ ಮಾಡಿದ್ದನ್ನು ಪ್ರತಿಭಟಿಸಿ ಜೋಡಿ ನಗರದ ಕಾಲೇಜು ಮತ್ತು ಸ್ಕೂಲುಗಳ ವಿದ್ಯಾರ್ಥಿಗಳು ತರಗತಿಗೆ ಹೋಗಲಿಲ್ಲ.

○

ಇ ಎಂ ಎಸ್ ಪ್ರಯತ್ನ ವಿಫಲ

ತ್ರಿವೇಂದ್ರ – ಶಾಸಕ ಸಭೆಯು 18 ವೋಟುಗಳ ಬಹುಸಂಖ್ಯೆಯಿಂದ ಶ್ರೀ ನಂಬೂದರಿಪಾದರ ತಿದ್ದುಪಡಿ ತಿರಸ್ಕರಿಸಿ, ಗವರ್ನರರ ಭಾಷಣಕ್ಕೆ ವಂದನಾ ನಿರ್ಣಯ ಮಂಜೂರ್ಮಾಡಿತು.

★

ಗೋಳೀಬಾರು

ಕೋಲಾರ— ಹೋಟಲುಗಳಲ್ಲಿ ಬೆಲೆ ಇಳಿಸಲು ವಿದ್ಯಾರ್ಥಿಗಳ ಚಳವಳಿದಲ್ಲಿನ ಗಲಭೆ ಗುಂಪಿನ ಮೇಲೆ ನಿನ್ನೆ ಪೋಲೀಸರ ಗೋಳೀಬಾರು ಚಿಂತಾಮಣಿಯಲ್ಲಿ ನಡೆದು ಒಬ್ಬ ಒಸತ್ತು 10 ಮಂದಿ ಗಾಯಗೊಂಡರು.

ಆಡಳಿತ ಭಾಷೆ ಕನ್ನಡ

ಬೆಂಗಳೂರು— ಎಲ್ಲಾ ಮಟ್ಟದಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವ ಕಾಲವು ಪಕ್ವವಾಗಿದೆಯೆಂದು ವಿದ್ಯಾ ಕಾರ್ಯದರ್ಶಿ ಶ್ರೀ ಕೆ ಆರ್ ರಾಮಚಂದ್ರ ಹೇಳಿದರು.

★

ದಯೆ ಕಾರ್ಯ

ಲಂಡನ್— ಸಂಯುಕ್ತ ನೈಜೀರಿಯಾ ತಾನು ಆಕ್ರಮಿಸಿದ ಬಯಾಫ್ರಾ ಭಾಗಕ್ಕೆ ಸಹಸ್ರಗಟ್ಟಲೆ ಆಹಾರ ಮತ್ತು ಔಷಧಿ ಕಳಿಸಿತು.

○

ಉಪಾಧ್ಯಾಯಿನಿ ಸಾವು

ಮಂಗಳೂರು— ಹುಡುಗಿಯರ ಪ್ರಾಥಮಿಕ ಶಾಲಾ ಉಪಾಧ್ಯಾಯಿನಿಯೊಬ್ಬಳು ಗುರುವಾರ ಸ್ಕೂಲು ಭಾವಿಗೆ ಬಿದ್ದಳೆಂದೂ ಈ ಅನಾಹುತ ತಿಳಿದುಬರುವದರೊಳಗೆ ಸತ್ತಿದ್ದಳೆಂದೂ ವರದಿಯಾಗಿದೆ.

★

ಪೋಸ್ಟು ಕಾರ್ಡುಗಳು

ನವದೆಹಲಿ— ಪೋಸ್ಟು ಕಾರ್ಡುಗಳ ಬೆಲೆ ತಗ್ಗಿಸುವ ಯೋಜನೆಯನ್ನು ಅಂಚೇ ತಂತೀ ಇಲಾಖೆ ತಿರಸ್ಕರಿಸಿದೆ.

★

ಕೀರ್ತಿವಂತ ಮೈಸೂರಿನವ

ಕಟಕ್— ರಾಷ್ಟ್ರೀಯ ಕ್ರೀಡೆಗಳಲ್ಲಿ 42.175 ಕಿಲೋಮೀಟರು ಓಡುವ ಪಂಥದಲ್ಲಿ ಮೈಸೂರಿನ ಡಿ. ವೈ. ಚಿಠೆದಾರ್ ಪ್ರಥಮ ಸ್ಥಾನ ಪಡೆದನು ; 2 ಗಂಟೆ 28 ನಿಮಿಷ 31.6 ಸೆಕೆಂಡುಗಳಲ್ಲಿ ಓಡಿದನು.

★

ವಾರ್ಷಿಕೋತ್ಸವ

ಮೈಸೂರು – ತಿಲಕ್ ನಗರದಲ್ಲಿಯ ಸುಜಾತಾ ಹೋಟಲಿನ ನಾಲ್ಕನೇ ವಾರ್ಷಿಕೋತ್ಸವವು ನಿನ್ನೆ ವೈಭವವಾಗಿ ನೆರವೇರಿತು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ|| ಜವರೇಗೌಡರು ಮಾಡಿದ ಭಾಷಣದಲ್ಲಿ, ಹೋಟಲಿನವರು ತಮ್ಮ ಸಂಸ್ಥೆಗಳನ್ನು ಜೊಕ್ಕಟವಾಗಿಟ್ಟು, ಶುಚಿರುಚಿಯಾದ ಆಹಾರವನ್ನು ಒದಗಿಸಬೇಕೆಂದು ಹೇಳಿದರು. ಮಾಲೀಕರಾದ ಶ್ರೀ ಸುಬ್ಬಕೃಷ್ಣ ರಾವ್ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ,
ಓಲ್ಡ್ ಬ್ಯಾಂಕ್ ರೋಡ್,
ಮೈಸೂರು.

ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ,
ಮೈಸೂರು–4.

ಅವಿವಾಹಿತರಿಗೆ ರಿಯಾಯಿತಿ

ಬೆಂಗಳೂರು— ಮುಂದಿನ ಬಜೆಟ್‌ನಲ್ಲಿ ಅವಿವಾಹಿತರಿಗೆ ತೆರಿಗೆ ರಿಯಾಯಿತಿ ನೀಡುವ ಸೂಚನೆಯನ್ನು ಕೇಂದ್ರ ಆರೋಗ್ಯ ಮಂತ್ರಿ ಡಾ|| ಚಂದ್ರಶೇಖರರು ವ್ಯಕ್ತ ಪಡಿಸಿದರು.

ಇಂದಿರಾರವರ ನುಡಿ

ನವದೆಹಲಿ— ಕೇಂದ್ರ ಸರಕಾರವು ಉತ್ತರ ಪ್ರದೇಶ ಸರ್ಕಾರವನ್ನಾಗಲೀ ಮತ್ತಿತರ ಯಾವುದೇ ಸರಕಾರವನ್ನಾಗಲೀ ಉರುಳಿಸುವ ಯೋಚನೆ ಹೊಂದಿಲ್ಲವೆಂದು ಪ್ರಧಾನಿ ಇಂದಿರಾರವರು ಹೇಳಿರುವರು.

ಸಾಧ್ಯವಿಲ್ಲ

ನವದೆಹಲಿ—ಹಳೇ ಕಾಂಗ್ರೆಸ್ಸು ಬೀಹಾರಿನಲ್ಲಿ ಮಂತ್ರಿಮಂಡಲ ರಚಿಸುವದು ಸಾಧ್ಯವಿಲ್ಲವೆಂದು ದಂಬಲಾಗಿದೆ

ರೈತ ಮತ್ತು ಕಾರ್ಮಿಕ ಸೇವಾ ಸಂಘ
ನಂ. 13, ಚಾಮರಾಜಪುರಂ, ಮೈಸೂರು 4

ರೈತ ಮತ್ತು ಕಾರ್ಮಿಕ ನಾಯಕ ಶ್ರೀ ಕೆ. ಪಿ. ಜಂಬೂಗೌಡರು ಅಧ್ಯಕ್ಷರಾಗಿ, ಶ್ರೀ ಎಂ. ಕೆ. ಮುಕುಂದರಾವ್, ಅವರು ಕಾರ್ಯದರ್ಶಿ ಆಗಿ ಇರುವ ರೈತ ಮತ್ತು ಕಾರ್ಮಿಕ ಸೇವಾ ಸಂಘ ರಚನೆಯಾಗಿದೆ. ಕಾರ್ಯಕಾರಿ ಸಮಿತಿಯಲ್ಲಿ 18 ಸದಸ್ಯರಿರುವರು.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲು
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI SUDHA

A Superb Tonic

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಔಷಧ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ ಶಿನಿ

ಅಮೋಘ 3 ನೇ ವಾರ

ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಅಶ್ವತ್, ಬಾಲಕೃಷ್ಣ, ಸಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಅಪೆರಾ—

ಅಮೋಘ 4ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಪರಿಷ್ಟ

ನಿರ್ದೇಶನ—ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4